ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್

ಒ.ಎಸ್. ನಂಬರ್ : 326/2010

ಡಿ.ಡಬ್ಲ್ಯೂ : 2
ಪ್ರಮಾಣ ವಚನ ಬೋಧಿಸಲಾಯಿತು :
ದಿನಾಂಕ : 16.07.2019

ದಿನಾಂಕ 30.05.2019 ರಂದು ಮೊಖ್ತ್ಯಾರುನಾಮೆಯನ್ನು ನಿಡಿ 1 ಎಂದು ಗುರುತಿಸಲಾಗಿದ್ದು, ಈಗಾಗಲೇ ನಿಡಿ 1 ಮತ್ತು 2 ಗುರುತಿಸಲ್ಪಟ್ಟಿರುವುದರಿಂದ ಸದರಿ ಮೊಖ್ತ್ಯಾರುನಾಮೆಯನ್ನು ನಿಡಿ 3 ಎಂದು ಮರು ಗುರುತಿಸಿಕೊಳ್ಳಲಾಯಿತು.

**ಪಾಟೀ ಸವಾಲು : ಶ್ರೀವಿ.ಎನ್.ಆರ್.ವಕೀಲರಿಂದ ವಾದಿ ಪರ.**

2 ನೇ ಪ್ರತಿವಾದಿಯ ಆಸ್ತಿಯ ಪಶ್ಚಿಮ ದಿಕ್ಕಿಗೆ ಕನ್ಸರ್ವೆನ್ಸಿ ಲೇನ್ ಇದೆ ಎಂದರೆ ಸರಿ. ಅದರ ಅಗಲ 10-12 ಅಡಿ ಇದೆ. ನನ್ನ ತಂದೆಯ ಕ್ರಯಪತ್ರದಲ್ಲಿ ಪಶ್ಚಿಮದ ಗಡಿಯನ್ನು ಕನ್ಸರ್ವೆನ್ಸಿ ಲೇನ್ ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ಕ್ರಯಪತ್ರ ನನ್ನ ಬಳಿ ಇರುತ್ತದೆ ಅದನ್ನು ಹಾಜರುಪಡಿಸಬಹುದು. ಸದರಿ ನಿವೇಶನದ ವಿಸ್ತೀರ್ಣ ಪೂರ್ವ ಪಶ್ಚಿಮ 40 ಅಡಿ ಮತ್ತು ಉತ್ತರ ದಕ್ಷಿಣ -25 ಅಡಿ ಇರುತ್ತದೆ. ಪುರಸಭೆಯವರು ನಮ್ಮ ಮನೆಯ ಪೂರ್ವದಿಕ್ಕಿನಲ್ಲಿ ರಸ್ತೆ ಕಿರಿದಾಗಿರುವುದರಿಂದ 3.5 ಅಡಿ ಒತ್ತುವರಿ ಮಾಡಿ ಚರಂಡಿ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ.

ನಾವು 2010 ರಲ್ಲಿ ನಮ್ಮ ನಿವೇಶನದಲ್ಲಿ ಮನೆ ಕಟ್ಟಿದ್ದೇವೆ. ನಮ್ಮ ಮನೆಯ ಪೂರ್ವದ ಕಡೆಗೆ ಸ್ವಲ್ಪ ಜಾಗ ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮನೆಯ ಅಳತೆ ಪೂರ್ವ-ಪಶ್ಚಿಮ 38.5 ಅಡಿ ಇರುತ್ತದೆ. ಮನೆಯ ಸಜ್ಜಾ ಸದರಿ 38.5 ಅಡಿ ವಿಸ್ತೀರ್ಣದ ಹೊರಗೆ ಇರುತ್ತದೆ. 1974 ರಲ್ಲಿ ಸದರಿ ನಿವೇಶನವನ್ನು ಖರೀದಿಸಿದಾಗ ಅದರಲ್ಲಿ ಮನೆ ಇತ್ತು. ಸದರಿ ಮನೆಯ ವಿಸ್ತೀರ್ಣ 38.5 ಅಡಿ X 21.5 ಅಡಿ ಇರುತ್ತದೆ. ಹಳೆಯ ಮನೆ ಇರುವಾಗ ನಮ್ಮ ಮನೆಯ ಪಶ್ಚಿಮದ ಕಡೆಗೆ ಓಡಾಡಲು ನಮ್ಮ ನಿವೇಶನದಲ್ಲೇ ಜಾಗ ಇತ್ತು ಎಂದರೆ ಸರಿಯಲ್ಲ. ಪೂರ್ವದ ಕಡೆಗೆ ಶೀಟ್ ನ ಶೆಡ್ ಇತ್ತು ಎಂದರೆ ಸರಿಯಲ್ಲ.

ಸದರಿ ಮನೆ ಕಟ್ಟುವ ಪೂರ್ವದಲ್ಲಿ ಲೈಸನ್ಸ ಮತ್ತು ಅನುಮೋದಿತ ನಕಾಶೆಯನ್ನು ಪಡೆದಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಾವು ಮನೆ ಕಟ್ಟುವ ಸಮಯದಲ್ಲಿ ನಮ್ಮ ಮನೆಯ ಪಶ್ಚಿಮದ ಕಡೆಗೆ ಕನ್ಸರ್ವೆನ್ಸಿ ಲೇನ್ ಇತ್ತು. ನಾವು ಸದರಿ ಕನ್ಸರ್ವೆನ್ಸಿ ಲೇನ್ ನ್ನು ಒತ್ತುವರಿ ಮಾಡಿ ಕಟ್ಟಿರುವುದರಿಂದ ಅದು ಇರುವುದಿಲ್ಲ ಎಂದರೆ ಸರಿಯಲ್ಲ. ಈಗ 4 ಅಡಿ ಕನ್ಸರ್ವೆನ್ಸಿ ಲೇನ್ ಮಾತ್ರ ಇರುತ್ತದೆ. ನಮ್ಮ ಮನೆಯ ಸರ್ಜಾ ಸದರಿ 4 ಅಡಿಯಲ್ಲಿ ಇದೆ ಎಂದರೆ ಸರಿಯಲ್ಲ. ನಾವು ಮನೆ ಕಟ್ಟುವಾಗ ನಮ್ಮ ಮನೆಯ ಪಶ್ಚಿಮದ ದಿಕ್ಕಿಗೆ ಇರುವ 3.5 ರಿಂದ 4 ಅಡಿ ಅಗಲದಷ್ಟು ಕನ್ಸರ್ವೆನ್ಸಿ ಲೇನ್ ನ್ನು ಬಳಸಿಕೊಂಡು ಮನೆ ಕಟ್ಟಿದ್ದೇನೆಂದರೆ ಸರಿಯಲ್ಲ. ವಾದಿ ಕಾಂತರಾಜು ರವರ ಪರಿಚಯವಿದೆ. ಅವರು 1983 ರಲ್ಲಿ ಅವರ ನಿವೇಶನದಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಸರಿ. ನಾನು ಮನೆ ಕಟ್ಟಿದ ನಂತರ ವಾದಿಯ ಮನೆಗೆ ಗಾಳಿ ಮತ್ತು ಬೆಳಕಿನ ಕೊರತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

2009 ರಲ್ಲಿ ವಾದಿ ಯಾವುದೇ ಮನೆ ಕಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಕನ್ಸರ್ವೆನ್ಸಿ ಲೇನ್ ನ್ನು ಒತ್ತುವರಿ ಮಾಡಿದ್ದರೂ ಕೂಡ ಮಾಡಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,ಆನೇಕಲ್.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ,
ಆನೇಕಲ್
ಒ.ಎಸ್. ನಂಬರ್ : 326/2010

ಡಿ.ಡಬ್ಲ್ಯೂ : 1
ಪ್ರಮಾಣ ವಚನ ಬೋಧಿಸಲಾಯಿತು :
ದಿನಾಂಕ : 16.07.2019

**ಪಾಟೀ ಸವಾಲು : ಶ್ರೀವಿ.ಎನ್.ಆರ್.ವಕೀಲರಿಂದ ವಾದಿ ಪರ.**

ನನಗೆ ವಾದಿಯ ಪರಿಚಯವಿದೆ. ವಾದಿಯ ಸ್ವತ್ತು ನಮ್ಮ ಮನೆಯ ಪಶ್ಚಿಮದ ಕಡೆಗೆ ಇದೆ ಎಂದರೆ ಸರಿ. ನಮ್ಮ ಮನೆ ಮತ್ತು ವಾದಿಯ ಜಾಗದ ಮಧ್ಯದಲ್ಲಿ ಕನ್ಸರ್ವೆನ್ಸಿ ಲೇನ್ ಇದೆ ಎಂದರೆ ಸರಿ. ಸದರಿ ಲೇನ್ ಮೊದಲು 12 ಅಡಿ ಇತ್ತು ಈಗ 8 ಅಡಿ ಇರುತ್ತದೆ.

ನಾನು 2009-10 ರಲ್ಲಿ ಮನೆ ಕಟ್ಟಿರುತ್ತೇನೆ. ನಾನು ಮಾರ್ಚ್ 2010 ರಲ್ಲಿ ಮನೆಯ ಪಾಯ ಹಾಕಿದ್ದೇನೆಂದರೆ ಸರಿಯಲ್ಲ. ನಾನು ಮನೆಯ ಪಾಯ ಹಾಕಿರುವಾಗ ಆನೇಕಲ್ ಪುರಸಭೆಗೆ ತಕರಾರು ಸಲ್ಲಿಸಿರಲಿಲ್ಲ. ನನ್ನ ಮತ್ತು ವಾದಿಯ ಮಧ್ಯೆ ಸದರಿ ಕನ್ಸರ್ವೆನ್ಸಿ ಲೇನ್ ಬಗ್ಗೆ ಪುರಸಭೆ ವತಿಯಿಂದ ಪಂಚಾಯತಿ ನಡೆದಿತ್ತು. ಸದರಿ ಮಾತುಕತೆ ಮಾರ್ಚ್ 2010 ರಲ್ಲಿ ಆಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ನಾನು ಮನೆ ಕಟ್ಟುವ ಪೂರ್ವದಲ್ಲಿ ನಮ್ಮ ಆಸ್ತಿಯ ಪಶ್ಚಿಮದ ಕಡೆಗೆ ಕನ್ಸರ್ವೆನ್ಸಿ ಲೇನ್ ಇತ್ತು ಎಂದರೆ ಸರಿ. ವಾದಿ 1983-84 ರಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಸರಿ.

ನಾನು ಮನೆ ಕಟ್ಟಿದ ಸ್ಥಳವು ನನಗೆ ನನ್ನ ಸಾಕು ತಂದೆ-ತಾಯಿಯಿಂದ ದಾನವಾಗಿ ಬಂದಿರುತ್ತದೆ. ಸದರಿ ದಾನಪತ್ರವು ನನ್ನ ಬಳಿ ಇರುತ್ತದೆ. ಅದನ್ನು ಹಾಜರುಪಡಿಸಬಹುದು. ನಾನು ಮನೆ ಕಟ್ಟುವ ಪೂರ್ವದಲ್ಲಿ ಲೈಸನ್ಸ್ ಮತ್ತು ಅನುಮೋದಿತ ನಕಾಶೆಯನ್ನು ಪಡೆದಿದ್ದೇನೆ. ಅದನ್ನು ಹಾಜರುಪಡಿಸಬಹುದು. ಅದರ ಮೂಲ ಪ್ರತಿ ಬ್ಯಾಂಕಿನಲ್ಲಿ ಇರುತ್ತದೆ. ಅದರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಬಹುದು. ನನ್ನ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ 40 ಅಡಿ, ಉತ್ತರ -ದಕ್ಷಿಣ 25 ಅಡಿ ಇರುತ್ತದೆ. ನನಗೆ ದಾನವಾಗಿ ಬರುವ ಸಮಯದಲ್ಲಿ ಸದರಿ

ಆಸ್ತಿಯಲ್ಲಿ ಆರ್.ಸಿ.ಸಿ. ಮನೆ ಮತ್ತು ಪಶ್ಚಿಮದ ಕಡೆಗೆ ಶೀಟ್ ಮನೆ ಇತ್ತು. ನನ್ನ ದಾನ ಪತ್ರದಲ್ಲಿ ಕೂಡ ಪಶ್ಚಿಮದ ಕಡೆಗೆ ಕನ್ಸರ್ವೆನ್ಸಿ ರಸ್ತೆ ಇರುವ ಬಗ್ಗೆ ತೋರಿಸಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿದ್ದ ಮನೆ ದಾನಪತ್ರ ನೀಡುವ ದಿನಾಂಕಕ್ಕೆ ನಿವೇಶನದ ವಿಸ್ತೀರ್ಣಕ್ಕಿಂತ ಚಿಕ್ಕದಾಗಿತ್ತು ಮತ್ತು ಮನೆಯ ಸುತ್ತಲೂ ಜಾಗ ಇತ್ತು ಎಂದರೆ ಸರಿ. ಸದರಿ ಮನೆಯನ್ನು 2009-10 ರಲ್ಲಿ ಒಡೆದು ಹಾಕಿದ್ದೇವೆ. ಆ ನಂತರ ಮನೆ ಕಟ್ಟಿದಾಗ ಪಶ್ಚಿಮದ ಕಡೆಗೆ ಇದ್ದ ಕನ್ಸರ್ವೆನ್ಸಿ ಲೇನ್ ನನ್ನು ಒತ್ತುವರಿ ಮಾಡಿ ಮನೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಕಟ್ಟಡದ ವಿಸ್ತೀರ್ಣ ಪೂರ್ವ-ಪಶ್ಚಿಮ 38.5 ಅಡಿ ಇರುತ್ತದೆ. ಸದರಿ ಮನೆಯ ಸರ್ಜಾ 38.5 ಅಡಿಯ ಹೊರಗೆ 1.5 ಅಡಿ ಇರುತ್ತದೆ. ನಮ್ಮ ಮನೆಯ ಪೂರ್ವದ ಕಡೆಗೆ ಸ್ವಲ್ಪ ಜಾಗ ಬಿಟ್ಟಿರುತ್ತೇವೆ ಎಷ್ಟು ಎಂದು ಗೊತ್ತಿಲ್ಲ. ನಮ್ಮ ಮನೆಯು ಅದೇ ಲೇನ್ ನಲ್ಲಿರುವ ಬೇರೆ ಮನೆಗಳಿಗಿಂತ ಸ್ವಲ್ಪ ಮುಂದೆ ಇದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪೂರ್ವದ ದಿಕ್ಕಿಗೆ ಇರುವ ರಸ್ತೆ ಕಿರಿದಾಗಿರುವುದರಿಂದ ಪುರಸಭೆಯವರು 3.5 ಅಡಿಯಷ್ಟು ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಅದರಲ್ಲಿ ಕಾಲುವೆ ಮಾಡಿರುತ್ತಾರೆ ಎಂದರೆ ಸರಿ. ನಾನು 2010 ರ ಮಾರ್ಚ್ ಮೊದಲ ವಾರದಲ್ಲಿ ವಾದಿಯ ಅನುಪಸ್ಥಿತಿಯಲ್ಲಿ ಏಕಾಏಕೀ ಕಟ್ಟಡ ಕಟ್ಟಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಕನ್ಸರ್ವೆನ್ಸಿ ಲೇನ್ ನ್ನು ಒತ್ತುವರಿ ಮಾಡಿ ಮನೆ ಕಟ್ಟಿರುವ ಬಗ್ಗೆ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಕನ್ಸರ್ವೆನ್ಸಿ ಲೇನ್ ನ 3 ರಿಂದ 4 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿರುತ್ತೇನೆಂದರೆ ಸರಿಯಲ್ಲ. ನಾನು ಒತ್ತುವರಿ ಮಾಡಿ ಮನೆ ಕಟ್ಟಿದ್ದರಿಂದ ವಾದಿಯ ಮನೆಗೆ ಸಮರ್ಪಕ ಗಾಳಿ, ಬೆಳಕು ಬರುತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,ಆನೇಕಲ್.